# 3 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆಎಂಎಫಸಿ ನ್ಯಾಯಾಲಯ

**ಹುಬ್ಬಳ್ಳಿ**

**ಸಿಸಿ ಸಂಖ್ಯೆಃ558ಃ15**

ಫಿರ್ಯಾದಿಃ ಬೆಂಡಿಗೇರಿ ಪೋಲೀಸ ಠಾಣೆ

ವಿರುದ್ಧ

ಆರೋಪಿ ಃ 1) ಮೌನೇಶ್ವರ ತಂದೆ ಮಲ್ಲೇಶಪ್ಪ ಏಳಗುಂಟಿ

ಹಾಗೂ ಇನ್ನಿತರರು

## ದೋಷಾರೋಪಣೆ

ದೀಪಾ ಜಿ ಮನೇರಕರ ಬಿ. ಕಾಂ., ಎಲ್ ಎಲ್ ಬಿ 3 ನೇ ಅಧಿಕ ದಿವಾಣಿ ನ್ಯಾಯಾಲಯ ಮತ್ತು ಜೆಎಂಎಫಸಿ ಹುಬ್ಬಳ್ಳಿ ಆದ ನಾನು ಈ ಕೆಳಕಂಡ ಆರೋಪಿತರಾದಃ-

ಆರೋಪಿ ನಂಬರ 1) ಮೌನೇಶ್ವರ ತಂದೆ ಮಲ್ಲೇಶಪ್ಪ ಕಲಬುರ್ಗಿ

ವಯಾಃ40 ವರ್ಷ, ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃ ಗೋಕುಲ ರೋಡ ಕುಮಾರ ಪಾರ್ಕ ಮನೆ ನಂಬರ 60

ಹುಬ್ಬಳ್ಳಿ

ಆರೋಪಿ ನಂಬರ 2) ರುದ್ರೇಶ ತಂದೆ ಬಸವರಾಜ ಶಿರೋಳ ಉರ್ಫ ಪಾಟೀಲ

ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃ ಹಳೇಹುಬ್ಬಳ್ಳಿ ನೇಕಾರನಗರ ರಣದಮ್ಮ ಕಾಲನಿ

1 ನೇ ಕ್ರಾಸ, ಹುಬ್ಬಳ್ಳಿ

ಆರೋಪಿ ನಂಬರ 3) ಶಶಿಧರ ತಂದೆ ಶಿವಲಿಂಗಯ್ಯ ಹಿರೇಮಠ

ವಯಾಃ30 ವರ್ಷ, ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃಜಮಖಂಡಿ ನ್ಯಾಮಗೌಡ ಗಲ್ಲಿ

ನಿಮ್ಮ ಮೇಲೆ ದೋಷಾರೋಪಣೆ ಹೊರಿಸುವುದೇನೆಂದರೆ

ಹುಬ್ಬಳ್ಳಿ ಬೆಂಡಿಗೇರಿ ಪೋಲೀಸ ಠಾಣೆಯ ಹದ್ದಿ ಪೈಕಿ ಹೊಸ ಗಬ್ಬೂರ ಬೆಲ್ಲದ ಆ್ಯಂಡ ಕಂಪನಿಯ ಕಚೇರಿಯಲ್ಲಿ 1 ನೇ ಆರೋಪಿಯಾದ ನೀವು ಅಸಿಸ್ಟಂಟ ಜನರಲ ಮ್ಯಾನೇಜರ ಎಂದು, 2 ಮತ್ತು 3 ನೇ ಆರೋಪಿತರಾದ ನೀವು ಸೇಲ್ಸ ಕನ್ಸಲ್ಟಂಟ ಎಂದು ಕೆಲಸ ಮಾಡುತ್ತಿದ್ದು, ದಿಃ15-9-2011 ರಂದು ಚಾಸಾ 6 ನೇದವರು ಅಶೋಕ ಲೈಲ್ಯಾಂಡ ಕಂಪನಿಯ ಡೀಲರರಾದ ಬೆಲ್ಲದ ಆ್ಯಂಡ ಕಂಪನಿಯ ಮುಖಾಂತರ ಅಶೋಕ ಲೈಲ್ಯಾಂಡ ಕಂಪನಿಯ 5 ಲಾರಿಗಳನ್ನು ಖರೀದಿಸುವ ಸಲುವಾಗಿ ಮುಂಗಡ ಹಣ 3,00,000-00 ಡಿಡಿ

ಮುಖಾಂತರ ಜಮಾ ಮಾಡಿಸುವುದನ್ನು ಆರೋಪಿತರಾದ ನೀವು ಮೂರು ಜನ ತಪ್ಪಿಸಿ ಅವರನ್ನು ಪುಸಲಾಯಿಸಿ ಹಣವನ್ನು ತಮ್ಮ ಕಡೆಗೆ ಕೊಡುವಂತೆ ನಂಬಿಸಿದ ಮೇರೆಗೆ ಅವರು ತನ್ನ ಪರವಾಗಿ ಬ್ಯಾಂಕಿಗೆ ಹಣ ತುಂಬಿ ಡಿಡಿ ಪಡೆಯಲು ಹಣದೊಂದಿಗೆ ಕಳುಹಿಸಿದ ಚಾಸಾ 7 ನೇದವರಿಂದ ರೂ. 3,00,000-00 ವನ್ನು 3 ನೇ ಆರೋಪಿ ಪಡೆದುಕೊಂಡು ತನಗೆ ಹಣ ಮುಟ್ಟಿದ ಬಗ್ಗೆ ತನ್ನ ಸ್ವ ಹಸ್ತಾಕ್ಷರದಿಂದ **"ಇಸ್ಮಾಯಿಲ್ ಗೀರಗಾಂವಿ ಇವರಿಂದ 3,00,000-00 ರೂ ಗಾಡಿಗೋಸ್ಕರ ಮುಂಗಡ ತೆಗೆದುಕೊಂಡಿರುತ್ತೇನೆ" ಇದರ ಬಗ್ಗೆ ರಶೀದಿಯನ್ನು ನಾಳೆ ಅಂದರೆ ದಿಃ16-9-2011 ರಂದು ತಂದು ಕೊಡುತ್ತೇನೆ ಅಂತಾ ಬರೆದುಕೊಟ್ಟಿರುತ್ತೇನೆ** ಅಂತಾ ಸದರಿಯವರ ಸಮಕ್ಷಮ ಒಂದು ಹಾಳೆಯಲ್ಲಿ ಬರೆದು ಅದರಲ್ಲಿ ತನ್ನ ಸಹಿ ಮಾಡಿ ಸದರ ಹಾಳೆಯನ್ನು ಚಾಸಾ 7 ನೇದವರಿಗೆ ನೀಡಿ ಮೋಸ ಹಾಗೂ ವಂಚನೆ ಮಾಡಿರುತ್ತೀರಿ

ಅದೇ ರೀತಿ ಚಾಸಾ 9 ನೇದವರು ಅಶೋಕ ಲೈಲಂಡ ಕಂಪನಿ ಲಾರಿ ಖರೀದಿಗೆಂದು 3,50,000-00 ಹಣವನ್ನು ದಿಃ30-9-2011 ರಂದು ಬೆಲ್ಲದ ಆ್ಯಂಡ ಕಂಪನಿ ಆಫೀಸಿಗೆ ತುಂಬಲು ಹೋದಾಗ ಅವರಿಂದ ಹಣವನ್ನು ಪಡೆದು ಆ ಹಣದಲ್ಲಿ 5000-00 ಮಾತ್ರ ಗ್ರಾಹಕರಿಗೆ ವಾಪಸ್ಸು ನೀಡಿ ಉಳಿದ 3,45,000-00 ಮಾತ್ರ ತೆಗೆದುಕೊಂಡು ಅವರ ಸಮಕ್ಷಮ 2 ನೇ ಆರೋಪಿತರಾದ ನೀವು ತನ್ನ ಸ್ವ ಹಸ್ತಾಕ್ಷರಗಳಿಂದ 3,45,000-00 ರೂ ಹಣದ ಮೊತ್ತವನ್ನು ಅಂಕಿ ವ ಅಕ್ಷರಗಳಲ್ಲಿ ಬರೆದು ತನ್ನ ಸಹಿ ಮಾಡಿ ಕ್ಯಾಶ ಕೌಂಟರಿಗೆ ಹೋಗಿ ಅಲ್ಲಿ ರೂ. 3,30,000-00 ಹಣ ಮಾತ್ರ ತುಂಬಿ ಅದರ ಬಗ್ಗೆ ಕ್ಯಾಸ ರಶೀದಿ ಪಡೆದು ರಶೀದಿಯನ್ನು ನೀವೆ ಇಟ್ಟುಕೊಂಡು ನೀವು ಬರೆದಿದ್ದ ರೂ.3,45,000-00 ಹಣದ ರಶೀದಿಯನ್ನು ಗ್ರಾಹಕರಿಗೆ ಕೊಟ್ಟ 15,000-00 ರೂ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು ಇರುತ್ತದೆ. ಅದೇ ರೀತಿ ಚಾಸಾ 10 ನೇದವರು 2011 ನೇ ಸಾಲಿನಲ್ಲಿ ಅಕ್ಟೋಬರ ತಿಂಗಳಲ್ಲಿ ಬೆಲ್ಲದ ಆ್ಯಂಡ ಕಂಪನಿ ಮುಖಾಂತರ ಅಶೋಕ ಲೈಲಂಡ ಲಾರಿ ಖರೀದಿ ಕುರಿತು 1 ಮತ್ತು 3 ನೇ ಆರೋಪಿತರೊಂದಿಗೆ ವ್ಯವಹಾರ ಮಾಡಿದಾಗ ಆರೋಪಿತರಾದ ನೀವು ಸದರಿಯವರನ್ನು ನಂಬಿಸಿ ಮನವೊಲಿಸಿ ಅವರಿಂದ ಲಾರಿ ಬುಕ್ಕಿಂಗ ಮುಂಗಡ ಹಣ ಅಂತಾ 65,000-00 ರೂಗಳನ್ನು ಪಡೆದು ಕಂಪನಿಗೆ ಜಮಾ ಮಾಡದೇ ಸ್ವಂತಕ್ಕೆ ಉಪಯೋಗಪಡಿಸಿಕೊಂಡು ಚಾಸಾ 10 ನೇದವರಿಗೆ ಮೋಸ ವಂಚನೆ ಮಾಡಿರುತ್ತೀರಿ. ಅದೇ ರೀತಿ ಚಾಸಾ 11 ನೇದವರು ಬೆಲ್ಲದ ಆ್ಯಂಡ ಕಂಪನಿಯ ಮುಖಾಂತರ ಅಶೋಕ ಲೈಲಾಂಡ ಲಾರಿ ಖರೀದಿಸುವ ಕುರಿತು ಕಂಪನಿಯವರೊಂದಿಗೆ ಸಂಪರ್ಕಿಸಿ ಕಂಪನಿಯ 3 ನೇ ಪ್ರತಿನಿಧಿಯವರೊಂದಿಗೆ ವ್ಯವಹಾರದ ಮಾತುಕತೆ ಮಾಡಿದಾಗ ಅವರು ಸದರಿ ಗ್ರಾಹಕರ ಮನವೊಲಿಸಿ ನಂಬಿಸಿ ದಿಃ22-10-11 ರಂದು ಲಾರಿ ಬುಕ್ಕಿಂಗ ಹಣ ಅಂತಾ ರೂ. 51,600-00 ರೂ ಹಣ ಪಡೆದುಕೊಂಡು ಅವರಿಗೆ ರಶೀದಿ ನಂತರ ಕೊಡುವುದಾಗಿ ಹೇಳಿ ಅವರಿಂದ ಪಡೆದ ಹಣದ ಪೈಕಿ ರೂ.25,000-00 ಹಣವನ್ನು ಮಾತ್ರ ದಿಃ24-10-11 ರಂದು ಕಂಪನಿಗೆ ತುಂಬಿ ಉಳಿದ 26,600 ರೂ ಹಣವನ್ನು 3 ನೇ ಆರೋಪಿ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು ಇರುತ್ತದೆ ಹೀಗೆ ಮೂರು ಜನ ಆರೋಪಿತರಾದ ನೀವು ಒಟ್ಟು 4,06,600-00 ಹಣವನ್ನು ಕಂಪನಿಗೆ ಜಮಾ ಮಾಡದೇ ವಂಚನೆ ಮತ್ತು ಮೋಸ ಮಾಡಿ ಭಾರತ ದಂಡ ಸಂಹಿತೆ ಕಲಂ 420 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ

ಎರಡನೇಯದಾಗಿ ದಿಃ30-9-2011 ರಂದು ಚಾಸಾ 9 ರವರು ಲಾರಿ ಖರೀದಿಗೆಂದು ರೂ. 3,50,000-00 ಹಣವನ್ನು ಬೆಲ್ಲದ ಆ್ಯಂಡ ಕಂಪನಿಯ ಕಚೇರಿಗೆ ತುಂಬಲು ಹೋದಾಗ ಕಚೇರಿಯಲ್ಲಿದ್ದ 2 ನೇ ಆರೋಪಿಯಾದ ನೀವು ಅವರನ್ನು ಮಾತಿನಲ್ಲಿ ತೊಡಗಿಸಿ ಮನವೊಲಿಸಿ ನಿಮಗೇಕೆ ತೊಂದರೆ ಹಣ ತುಂಬಿ ರಶೀದಿ ತಂದು ಕೊಡುವುದಾಗಿ ಹೇಳಿ ಅವರಿಂದ 3,50,000-00 ಹಣವನ್ನು ಪಡೆದು ಆ ಹಣದಲ್ಲಿ ರೂ.5000-00 ವಾಪಸ್ಸು ನೀಡಿ ಉಳಿದ 3,45,000-00 ಮಾತ್ರ ತೆಗೆದುಕೊಂಡು ಇನ್ನು ಪ್ರಾರಂಬಿಸಿದ ಬೆಲ್ಲದ ಆ್ಯಂಡ ಕಂಪನಿಯ ಕ್ಯಾಸ ರಶೀದಿ ಬುಕ ನಂಬರ ಡಿ 2001 ರಿಂದ ಡಿ 2200 ರವರೆಗಿನ ರಿಸಿಪ್ಟಗಳಿರುವ ಬುಕ್ಕಿನಲ್ಲಿಯ ಬ್ಲ್ಯಾಂಕ ರಿಸಿಪ್ಟ ನಂಬರ 2195, 2196 ನೇದವುಗಳನ್ನು ಕಂಪನಿಯವರ ಗಮನಕ್ಕೆ ಬಾರದಂತೆ ಸದರಿ ಬುಕ್ಕಿನಿಂದ ಹರಿದುಕೊಂಡು ಅವುಗಳ ಪೈಕಿ 2195 ನೇ ರಶೀದಿಯನ್ನು ಮೋಸ ಮಾಡುವಗೋಸ್ಕರ ಚಾಸಾ 9 ರವರಿಗೆ ನೀಡಿ ಭಾರತ ದಂಡ ಸಂಹಿತೆ ಕಲಂ 468 ಸಹ ಕಲಂ 34 ರಡಿಯಲ್ಲಿ ನೀವುಗಳು ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ

ಮೂರನೇಯದಾಗಿ, ಬೆಲ್ಲದ ಆ್ಯಂಡ ಕಂಪನಿಯ ಕಚೇರಿಯಲ್ಲಿ ಅಸಿಸ್ಟಂಟ ಜನರಲ್ ಮ್ಯಾನೇಜರ ಎಂದು ಕೆಲಸ ನಿರ್ವಹಿಸುತ್ತಿದ್ದ 1 ನೇ ಆರೋಪಿ, ಸೇಲ್ಸ ಕನ್ಸಲ್ಟಂಟ ಎಂದು ಕೆಲಸ ನಿರ್ವಹಿಸುತ್ತಿದ್ದ 2 ಮತ್ತು 3 ನೇ ಆರೋಪಿತರಾದ ನೀವು ದಿಃ15-9-2011 ರಂದು ಚಾಸಾ 6 ರಿಂದ 5 ಲಾರಿಗಳನ್ನು ಅಡ್ವಾನ್ಸ ಬುಕ್ಕಿಂಗ ಮಾಡಲು 3,00,000-00 ಪಡೆದು ಸದರಿ ಹಣವನ್ನು ಬೆಲ್ಲದ ಆ್ಯಂಡ ಕಂಪನಿಗೆ ಜಮಾ ಮಾಡದೇ ಸ್ವಂತಕ್ಕೆ ಬಳಸಿಕೊಂಡಿದ್ದು, ದಿಃ30-9-2011 ರಂದು ಎರಡನೇ ಆರೋಪಿಯಾದ ನೀವು ಚಾಸಾ 9 ರವರಿಂದ ಅಶೋಕ ಲೈಲ್ಯಾಂಡ ಕಂಪನಿಯ ಲಾರಿ ಬುಕಿಂಗಗೋಸ್ಕರ ರೂ. 3,50,000-00 ಹಣ ಪಡೆದು ಆ ಪೈಕಿ ರೂ.3,30,000-00 ಮಾತ್ರ ತುಂಬಿ, ರೂ. 15,000-00 ಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತೀರಿ. 2011 ರಲ್ಲಿ ಚಾಸಾ 10 ರವರಿಂದ ಲಾರಿ ಬುಕ್ಕಿಂಗಗೋಸ್ಕರ 65,000-00 ಪಡೆದು ಅದನ್ನು ಕಂಪನಿಗೆ ಜಮಾ ಮಾಡದೇ ನಿಮ್ಮ ಲಾಭಗೋಸ್ಕರ ಉಪಯೋಗಿಸಿಕೊಂಡಿದ್ದು, ದಿಃ22-10-2014 ರಂದು 26,600-00 ಕಂಪನಿಗೆ ತುಂಬದೆ ನಿಮ್ಮ ನಿಮ್ಮ ಲಾಭಗೋಸ್ಕರ ಉಪಯೋಗಿಸಿಕೊಂಡಿದ್ದು ಹೀಗೆ ಒಟ್ಟು ರೂ.**4,06,600** ಹಣವನ್ನು ಕಂಪನಿಗೆ ಭರಣಾ ಮಾಡದೇ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಭಾರತ ದಂಡ ಸಂಹಿತೆ ಕಲಂ 406 ಸಹ ಕಲಂ 34 ರಡಿಯಲ್ಲಿ ನೀವುಗಳು ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ

ನೀವು ಸದರಿ ಆರೋಪಗಳ ಮೇಲೆ ಸದರಿ ನ್ಯಾಯಾಲಯದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

3 ನೇ ಅಧಿಕ ದಿವಾಣಿ ವ ಜೆಎಂಎಫಸಿ ನ್ಯಾಯಾಲಯ,
ಹುಬ್ಬಳ್ಳಿ

**3 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆಎಂಎಫಸಿ ನ್ಯಾಯಾಲಯ**

**ಹುಬ್ಬಳ್ಳಿ**

**ಸಿಸಿ ಸಂಖ್ಯೆಃ558:18**

ಫಿರ್ಯಾದಿಃ ಬೆಂಡಿಗೇರಿ ಪೋಲೀಸ ಠಾಣೆ

ವಿರುದ್ಧ

ಆರೋಪಿ ನಂಬರ 1) ಮೌನೇಶ್ವರ ತಂದೆ ಮಲ್ಲೇಶಪ್ಪ ಕಲಬುರ್ಗಿ

ವಯಾಃ40 ವರ್ಷ, ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃ ಗೋಕುಲ ರೋಡ ಕುಮಾರ ಪಾರ್ಕ ಮನೆ ನಂಬರ 60

ಹುಬ್ಬಳ್ಳಿ

ಆರೋಪಿಯ ಹೇಳಿಕೆ

**ಪ್ರಶ್ನೆಃ** ನಿಮಗೆ ಓದಿ ಹೇಳಿದ ದೋಷಾರೋಪಣೆ ತಿಳಿಯತೇ **?**

**ಉತ್ತರಃ**

**ಪ್ರಶ್ನೆಃ** ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?**

**ಉತ್ತರಃ**

**(**ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಸದರಿ ಹೇಳಿಕೆಯನ್ನು ಓದಿ ಹೇಳಿ ಅವರಿಂದ ಉತ್ತರ ಪಡೆದುಕೊಂಡು ಸರಿ ಇದೆಯೆಂದು ದೃಢೀಕರಿಸುತ್ತೇನೆ**.)**

**ಹುಬ್ಬಳ್ಳಿ**
**ದಿಃ 28.06.2018**

**3ನೇ ಹೆ ದಿ ನ್ಯಾ (ಕಿ ವಿ )**
**ಮತ್ತು ಜೆಎಂಎಫಸಿ ಹುಬ್ಬಳ್ಳಿ**

**3 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆಎಂಎಫಸಿ ನ್ಯಾಯಾಲಯ**

**ಹುಬ್ಬಳ್ಳಿ**

**ಸಿಸಿ ಸಂಖ್ಯೆಃ558:18**

ಫಿರ್ಯಾದಿಃ ಬೆಂಡಿಗೇರಿ ಪೋಲೀಸ ಠಾಣೆ

ವಿರುದ್ಧ

ಆರೋಪಿ ನಂಬರ 2) ರುದ್ರೇಶ ತಂದೆ ಬಸವರಾಜ ಶಿರೋಳ ಉರ್ಫ ಪಾಟೀಲ

ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃ ಹಳೇಹುಬ್ಬಳ್ಳಿ ನೇಕಾರನಗರ ರಣದಮ್ಮ ಕಾಲನಿ

1 ನೇ ಕ್ರಾಸ, ಹುಬ್ಬಳ್ಳಿ

ಆರೋಪಿಯ ಹೇಳಿಕೆ

**ಪ್ರಶ್ನೆಃ** ನಿಮಗೆ ಓದಿ ಹೇಳಿದ ದೋಷಾರೋಪಣೆ ತಿಳಿಯತೇ **?**

**ಉತ್ತರಃ**

**ಪ್ರಶ್ನೆಃ** ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?**

**ಉತ್ತರಃ**

**(**ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಸದರಿ ಹೇಳಿಕೆಯನ್ನು ಓದಿ ಹೇಳಿ ಅವರಿಂದ ಉತ್ತರ ಪಡೆದುಕೊಂಡು ಸರಿ ಇದೆಯೆಂದು ದೃಢೀಕರಿಸುತ್ತೇನೆ.**)**

**ಹುಬ್ಬಳ್ಳಿ**
**ದಿಃ 28.06.2018**

**3ನೇ ಹೆ ದಿ ನ್ಯಾ (ಕಿ ವಿ )**
**ಮತ್ತು ಜೆಎಂಎಫಸಿ ಹುಬ್ಬಳ್ಳಿ**

## 3 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆಎಂಎಫಸಿ ನ್ಯಾಯಾಲಯ

**ಹುಬ್ಬಳ್ಳಿ**

**ಸಿಸಿ ಸಂಖ್ಯೆ:558:18**

ಫಿರ್ಯಾದಿಃ ಬೆಂಡಿಗೇರಿ ಪೋಲೀಸ ಠಾಣೆ

ವಿರುದ್ಧ

ಆರೋಪಿ ನಂಬರ 3) ಶಶಿಧರ ತಂದೆ ಶಿವಲಿಂಗಯ್ಯ ಹಿರೇಮಠ

ವಯಾಃ30 ವರ್ಷ, ಉಃಬೆಲ್ಲದ ಕಂಪನಿಯಲ್ಲಿ ಕೆಲಸ

ಸಾಃಜಮಖಂಡಿ ನ್ಯಾಮಗೌಡ ಗಲ್ಲಿ

ಆರೋಪಿಯ ಹೇಳಿಕೆ

**ಪ್ರಶ್ನೆಃ** ನಿಮಗೆ ಓದಿ ಹೇಳಿದ ದೋಷಾರೋಪಣೆ ತಿಳಿಯತೇ **?**
**ಉತ್ತರಃ**

**ಪ್ರಶ್ನೆಃ** ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?**

**ಉತ್ತರಃ**

**(**ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಸದರಿ ಹೇಳಿಕೆಯನ್ನು ಓದಿ ಹೇಳಿ ಅವರಿಂದ ಉತ್ತರ ಪಡೆದುಕೊಂಡು ಸರಿ ಇದೆಯೆಂದು ದೃಢೀಕರಿಸುತ್ತೇನೆ.**)**

**ಹುಬ್ಬಳ್ಳಿ**
**ದಿಃ 28.06.2018**

**3ನೇ ಹೆ ದಿ ನ್ಯಾ (ಕಿ ವಿ )**
**ಮತ್ತು ಜೆಎಂಎಫಸಿ ಹುಬ್ಬಳ್ಳಿ**